# ವಾಕ್ಯಕ್ಕನುಗುಣವಾದ ಸಭೆಯ ಕೆಲಸ

ಸಭೆಯ ಕಾರ್ಯವೇನೆಂಬುದನ್ನು ಅಪೊಸ್ತಲರ ಕೃತ್ಯಗಳು ತಿಳಿಸುತ್ತದೆ. ಅಪೊಸ್ತಲರು ಸಾಧಿಸಬೇಕಾದಂತಹ ಮಹಾ ಆದೇಶದ ಸೇವೆಯನ್ನು ಅವರು ಪಾಲಿಸಿದರು. ಅವರು ಸಾಧಿಸಬೇಕಾದ ಕಾರ್ಯವನ್ನು ಸಾಧಿಸಲು ಪವಿತ್ರಾತ್ಮನಿಗಾಗಿ ಕಾದುಕೊಂಡು, ಅವರು ಬಲಹೊಂದಿದ ನಂತರ, ಕರ್ತನು ನೀಡಿದ ಸವಾಲುಗಳನ್ನು ಎದುರಿಸಬೇಕಿತ್ತು (ಅಪೊಸ್ತಲರ ಕೃತ್ಯಗಳು 1:8). ಅವರು ಆತ್ಮನಿಂದ ಪ್ರೇರಿತರಾಗುವವರಿದ್ದರು, (1) ಆ ಮೂಲಕ ಅವರು ಯೇಸುವಿನ ಬೋಧನೆಯನ್ನು ನೆನಪು ಮಾಡಲು ಸಾಧ್ಯವಿತ್ತು, (2) ಕ್ರಿಸ್ತಯೇಸುವಿಗೆ ಸಾಕ್ಷಿಯಾಗುತ್ತಿದ್ದರು ಮತ್ತು (3) ಅವರು ಅಪೊಸ್ತಲರಾಗಿ ಪರಿಣಾಮಕಾರಿಯಾದ ಕಾರ್ಯವನ್ನು ಮಾಡಲು, ಸತ್ಯದ ಮೂಲಕ ನಡೆಸಲ್ಪಡುತ್ತಿದ್ದರು (ಯೋಹಾನ 14:26; 15:26, 27; 16:13).

ಅವರು ನಾಯಕತ್ವ ಹಾಗೂ ಬೋಧನೆಗಳಿಂದ ಪ್ರೇರಿತರಾಗಿದ್ದರು. ಸುವಾರ್ತೆ ಯನ್ನು ಸಾರಿದ ನಂತರ, ಪಶ್ಚಾತ್ತಾಪಪಟ್ಟ ವಿಶ್ವಾಸಿಗಳಿಗೆ ದೀಕ್ಷಾಸ್ನಾನ ಮಾಡಿಸಿದ ನಂತರ, ಉಪದೇಶವನ್ನು ಅನುಸರಿಸುವಂತೆ ಅವರನ್ನು ಮುನ್ನಡೆಸಬೇಕಿತ್ತು (ಮತ್ತಾಯ 28:20). ಆದಿ ಸಭೆಯನ್ನು ಅಪೊಸ್ತಲರು ನಡಿಸಿ, ನಿರ್ವಹಿಸಿದ ಕಾರ್ಯಗಳನ್ನೇ, ತರುವಾಯದ ಜನಾಂಗದವರು ಮುಂದುವರಿಸಿಕೊಂಡು ಹೋಗಬೇಕು, ಹಾಗೂ ಸಭೆಗಳು ಅದನ್ನೇ ಮಾಡಬೇಕೆಂದು ನಿರೀಕ್ಷಿಸಲಾಗಿದೆ.

ಲೂಕನು ಗುರುತರವಾದ, ಉತ್ತೇಜನ, ಶುದ್ಧತೆ ಹಾಗೂ ವೃದ್ಧಿಯನ್ನು ದಾಖಲಿಸಿರುವನು (ಅಪೊಸ್ತಲರ ಕೃತ್ಯಗಳು 9:31). ಪ್ರಪಂಚದ ಮೂವತ್ತು ವರ್ಷಗಳ ಕಾಲದ ಚರಿತ್ರೆಯನ್ನು ಮಾತ್ರ ಅಪೊಸ್ತಲರ ಕೃತ್ಯದಲ್ಲಿ ಗಮನಿಸುತ್ತೇವೆ (ಕ್ರಿ.ಶ. 33 ರಿಂದ 62), ಅದಾಗ್ಯೂ ಕರ್ತನ ಸಭೆಯ ಕುರಿತ ಮೂರು ದಶಕ ಕಾಲಗಳ ವಿಶೇಷ ಚರಿತ್ರೆಯನ್ನು ತಿಳಿಸಲಾಗಿದೆ. ಸಭೆಯು ದೇವರನ್ನು ಮೆಚ್ಚಿಸುವ ವಿಧಾನವನ್ನು ಈ ಪುಸ್ತಕವು ತಿಳಿಸುತ್ತದೆ.

### ನಾಶವಾಗುವವರಿಗೆ ಸಭೆಗಳು ಬೋಧಿಸಿದವು

ಅಪೊಸ್ತಲರು ದೇವಾಲಯದಲ್ಲಿ ಉಪದೇಶಿಸುವ ಮೂಲಕ ಪ್ರಥಮ ಮಾದರಿಯನ್ನು ತೋರಿದರು (ಅಪೊಸ್ತಲರ ಕೃತ್ಯಗಳು 2:42, 46). ಈ ಆಚರಣೆಯ ಮುಖಾಂತರ ಸಾವಿರಾರು ಜನರು ಪರಿವರ್ತನೆಗೊಂಡರು. ಹಲವಾರು ದಿನಗಳ ಹಿಂದೆ, ಅಪೊಸ್ತಲರು ಯೇಸುವಿನ ಹೆಸರಿನಲ್ಲಿ ಉಪದೇಶಮಾಡಬಾರದೆಂಬ ಆದೇಶವನ್ನು ಹೊಂದಿದ್ದರು; ಆದರೆ ಅಪೊಸ್ತಲರು ಆ ಆದೇಶಕ್ಕೆ ವಿರೋಧವಾಗಿ ಮಾಡಿದರು (ಅಪೊಸ್ತಲರ ಕೃತ್ಯ ಗಳು 4:17-19). ಯೆಹೂದ್ಯರಿಂದ ಪೆಟ್ಟುಗಳನ್ನು ತಿಂದರೂ, ಅವರು ಎಡೆಬಿಡದೆ ಉಪದೇಶಿಸುತ್ತಿದ್ದರು ಎಂದು ಲೂಕನು ತಿಳಿಸಿರುವನು (ಅಪೊಸ್ತಲರ ಕೃತ್ಯಗಳು 5:17-21, 40).[1] ಈ ಪ್ರಸಂಗಿಗಳು ತಮ್ಮವರನ್ನು ಸೇರಿಕೊಳ್ಳುವಾಗ, ಯೆರೂಸಲೇಮಿನ ಬೀದಿಗಳಲ್ಲಿ ರಕ್ತದ ಗುರುತುಗಳನ್ನು ಬಿಟ್ಟುಹೋದರು.

ಈ ಹಿಂದೆ ಅವರು ಯೇಸುವಿನ ಕುರಿತು ಹಿಂಜರಿಯುವವರಾಗಿದ್ದಾಗ್ಯೂ, ಈಗ ಯೇಸುವಿಗಾಗಿ ಪ್ರಸಂಗಿಸುವದು ಯೋಗ್ಯವೆಂದು ಅರಿತಿದ್ದರು (ಅಪೊಸ್ತಲರ ಕೃತ್ಯಗಳು 5:41, 42). ಅವರು ಧೈರ್ಯವಾಗಿ ಸುವಾರ್ತೆಯನ್ನು ಸಾರಿದ್ದರಿಂದ, ಶಿಷ್ಯರು ಹೆಚ್ಚಾದರು (ಅಪೊಸ್ತಲರ ಕೃತ್ಯಗಳು 6:7).

ಕ್ರಿಸ್ತನ ಸಭೆಗೆ ಹಿಂಸೆಯು ಹೆಚ್ಚಾಗುತ್ತಾ ಬಂತು; ಸ್ತೆಫನನನ್ನು ಕಲ್ಲೆಸೆದು ಕೊಂದ

ಮೇಲೆ ಶಿಷ್ಯರು ತಮ್ಮ ಮನೆಗಳನ್ನು ಬಿಟ್ಟು ಯೆರೂಸಲೇಮಿನಿಂದ ಚದರಿಹೋದರು. ಹೇಗೂ ಚದರಿ ಹೋದವರು ಎಲ್ಲಾ ಸ್ಥಳಗಳಲ್ಲಿ ಸುವಾರ್ತೆಯನ್ನು ಸಾರಿದರು (ಅಪೊಸ್ತಲರ ಕೃತ್ಯಗಳು 8:1-4). ಕೆಲವರು ಸಮಾರ್ಯದವರೆಗೂ ಹೋದರೂ, ಪೇತ್ರ ಯೋಹಾನರನ್ನು ಅವರ ಸಹಾಯಕ್ಕಾಗಿ ಸಭೆಯವರು ಕಳುಹಿದರು (ಅಪೊಸ್ತಲರ ಕೃತ್ಯ ಗಳು 8:5-24). ಅವರು ಸಮಾರ್ಯದಿಂದ ಹಿಂದಿರುಗುವಾಗ, ಪೇತ್ರ ಯೋಹಾನರು ಅನೇಕ ಹಳ್ಳಿಗಳಲ್ಲಿ ಸುವಾರ್ತೆ ಸಾರಿದರು (ಅಪೊಸ್ತಲರ ಕೃತ್ಯಗಳು 8:25).

ಅದೇ ಹಿಂಸೆಯ ಪರಿಣಾಮವಾಗಿ, ಅನೇಕ ಕ್ರೈಸ್ತರು ಸಿರಿಯದ ಅಂತಿಯೋಕ್ಯಕ್ಕೆ ಹೋದರು, ಮತ್ತು ಯೆರೂಸಲೇಮಿನ ಸಭೆಯವರು ಸಹಾಯಕ್ಕಾಗಿ ಉಪದೇಶಕರನ್ನು ಅಲ್ಲಿಗೆ ಕಳುಹಿಸಿದರು (ಅಪೊಸ್ತಲರ ಕೃತ್ಯಗಳು 11:19-26). ಅಪೊಸ್ತಲರ ಕೃತ್ಯಗಳು 2ರ ಪಂಚಾಶತ್ತಮ ದಿನವು ಕಳೆದು ಅನೇಕ ವರ್ಷಗಳು ಗತಿಸಿದ ನಂತರವೂ ಸುವಾರ್ತಾ ಪ್ರಚಾರವೂ ಭರದಿಂದ ಸಾಗಿತ್ತು ಎಂದು ಲೂಕನು ದಾಖಲಿಸಿರುವನು. ಬೇಗನೇ ಸಭೆಯವರು ಬಾರ್ನಬ ಹಾಗೂ ಪೌಲರನ್ನು ಮೂರು ಸೇವಾ ಪ್ರಯಾಣಗಳ, ಮೊದಲ ಪ್ರಯಾಣಕ್ಕೆ ಕಳುಹಿಸಿದರು (ಅಪೊಸ್ತಲರ ಕೃತ್ಯಗಳು 13:1-3). ಅಪೊಸ್ತಲರ ಕೃತ್ಯಗಳ ಉಳಿದ ಭಾಗವು ಈ ಪ್ರಯಾಣಗಳಲ್ಲಿ ಜರುಗಿದ ಕೃತ್ಯಗಳೇ ಆಗಿವೆ.

ನಂತರದ ವರ್ಷಗಳಲ್ಲಿ ಸ್ಥಾಪನೆಗೊಂಡ ಸಭೆಗಳು, ಯೆರೂಸಲೇಮು ಹಾಗೂ ಅಂತಿಯೋಕ್ಯದ ಸಭೆಗಳಂತೆಯೇ ಫಲಪ್ರದವಾಗಿದ್ದವು. ಥೆಸಲೋನಿಕ ಸಭೆಯವರು ಇತರರಿಗೆ ಸುವಾರ್ತೆಯನ್ನು ಘೋಷಿಸಿದರು (1 ಥೆಸಲೋನಿಕ 1:7, 8), ಎಫೆಸದವರು, ಆಸ್ಯ ಸೀಮೆಯಲ್ಲೆಲ್ಲಾ ಸುವಾರ್ತಾ ಪ್ರಸಾರಣ ಮಾಡಿದರು (ಅಪೊಸ್ತಲರ ಕೃತ್ಯಗಳು 19:10).

ಸುವಾರ್ತೆಯನ್ನು ಸಾರಲು ಅಪೊಸ್ತಲರಿಗೆ, ಯೇಸು ಆದೇಶವನ್ನು ನೀಡಿದ್ದನು, ಅದರಂತೆ ಅಪೊಸ್ತಲರು ಆ ಕಾರ್ಯವನ್ನು ಸಾಧಿಸಿ ತೋರಿಸಿದರು. "ಸಭೆಯು ಕ್ರಿಸ್ತನಲ್ಲಿ ಪರಿಪೂರ್ಣತೆಯುಳ್ಳದ್ದಾಗಿದೆ" ಎಂದು ಪೌಲನು ಉಪದೇಶಿಸಿರುವನು (ಎಫೆಸ 1:22, 23). ಇದರಲ್ಲಿ ಯೇಸು ಭೂಮಿಯ ಮೇಲೆ ಇರುವಾಗ ಮಾಡಿದ್ದನ್ನೆ, ಸಭೆಯು ಮಾಡಬೇಕಿದೆ ಎಂಬ ಸೂಚನೆಯಿದೆ! ಆದಿ ಸಭೆಯವರು ಇದನ್ನೆ ಮಾಡಿದರು, ಪ್ರತಿ ಜನಾಂಗದವರು ಅದೇ ವಿಧದ ಫಲಪ್ರದವಾದ ಸದ್ಗುಣಗಳನ್ನು ಹೊಂದಿರಬೇಕೆಂದು ಯೇಸು ಇಚ್ಛಿಸುತ್ತಾನೆ.

## ಸಭೆಗಳು ದೇವ ಜನರಿಗೆ ಉತ್ತೇಜನ ನೀಡಿದವು

ಯೆರೂಸಲೇಮಿನ ಸಭೆಯಲ್ಲಿ ಸತ್ಯವು ಮತ್ತು ಗಣನೀಯ ಅಭಿವೃದ್ಧಿಯು ಉಂಟಾಯಿತು, ಅದು ಸಂಖ್ಯೆಗನುಗುಣವಾಗಿಯೂ ಮತ್ತು ಆತ್ಮೀಕಯವಾಗಿಯೂ ವೃದ್ಧಿಗೊಂಡಿತು. ಅದರ ಸದಸ್ಯರು ಆರಾಧನೆ ಮತ್ತು ಸರಿಯಾದ ಬೋಧನೆಯಲ್ಲಿಯೂ ಮುಂದುವರಿದರು (ಅಪೊಸ್ತಲರ ಕೃತ್ಯಗಳು 2:42). ಅವರು "ಒಂದೇ ಆತ್ಮ ಹಾಗೂ ದೇಹದಂತಿದ್ದರು" (ಅಪೊಸ್ತಲರ ಕೃತ್ಯಗಳು 4:32), ಮತ್ತು ಅವರು ದೇವರ ಚಿತ್ತವನ್ನು ಗೌರವಿಸುವದರಲ್ಲಿ ಮುಂದಾದರು (ಅಪೊಸ್ತಲರ ಕೃತ್ಯಗಳು 5:11). ಅವರ ಜೀವಿತದಲ್ಲಿ ವಾಕ್ಯ ಪ್ರಗತಿಯಾಗುವಂತೆ ಅದಕ್ಕೆ ತಮ್ಮನ್ನು ಒಪ್ಪಿಸಿಕೊಟ್ಟರು (ಅಪೊಸ್ತಲರ ಕೃತ್ಯಗಳು 6:7).

ಸ್ತೆಫನನ ದೇಹವನ್ನು ಸಮಾಧಿಮಾಡುವ ವಿಚಾರದಲ್ಲಿ ಕ್ರೂರಿಗಳಾದ ಯೆಹೂದ್ಯರನ್ನು ಎದುರಿಸಲು ಧೈರ್ಯಗೊಂಡಿದ್ದರು (ಅಪೊಸ್ತಲರ ಕೃತ್ಯಗಳು 8:2). ತಮ್ಮ ಜೀವ ರಕ್ಷಣೆಗಾಗಿ ಭಯದಿಂದ ತಪ್ಪಿಸಿಕೊಂಡು ಹೋಗಲು ಪ್ರಯತ್ನಿಸಿದವರೂ ಸಹ ನಂಬಿಗಸ್ತರಾಗಿ ಉಳಿದರು (ಅಪೊಸ್ತಲರ ಕೃತ್ಯಗಳು 8:4). ಭಯಂಕರವಾದ ಹಿಂಸೆಯನ್ನು ನೀಡುತ್ತಿದ್ದವನಾದ ಪೌಲನು ಪರಿವರ್ತನೆಗೊಂಡ ನಂತರ, ಸಭೆಯು ಸಮಾಧಾನವನ್ನು ಪ್ರೋತ್ಸಾಹವನ್ನು ಹೊಂದಿತು (ಅಪೊಸ್ತಲರ ಕೃತ್ಯಗಳು 9:31). ಪೇತ್ರನು ಅನ್ಯರಿಗೆ ಸುವಾರ್ತೆಯನ್ನು ಸಾರಿದರ ನಿಮಿತ್ತ, ದೇವರು ಪಕ್ಷಪಾತಿಯಲ್ಲ ಎಂಬ ತತ್ವನ್ನು ಆದಿ ಕ್ರೈಸ್ತರು ಅರಿತರು (ಕೋರ್ನೇಲ್ಯ ಮತ್ತು ಅವನ

ಮನೆಯವರು ಅಪೊಸ್ತಲ ರ ಕೃತ್ಯಗಳು 10). ಈ ಬದಲಾವಣೆಯನ್ನು ಯೆಹೂದ್ಯರ ಕ್ರೈಸ್ತರು ಒಪ್ಪಿಕೊಳ್ಳಲು ಅಸಾಧ್ಯವಾಗಿತ್ತು, ಆದರೆ ಸುವಾರ್ತೆಯು ಅನ್ಯರನ್ನೂ ದಾಟಿಹೋಯಿತು ಎಂಬದನ್ನು ಕಲಿತುಕೊಂಡರು (ಅಪೊಸ್ತಲರ ಕೃತ್ಯಗಳು 11:1-18).

ನಂತರದಲ್ಲಿ, ಹಿಂಸೆಯ ನಿಮಿತ್ತ ಯಾಕೋಬನು ಸತ್ತನು, ಅವನು ಯೋಹಾನನ ಸಹೋದರನು, ಆದರೆ ಸಭೆಯು ಪ್ರಾರ್ಥನೆ ಹಾಗೂ ವಾಕ್ಯದಲ್ಲಿ ವೃದ್ಧಿಗೊಂಡಿತು (ಅಪೊಸ್ತಲರ ಕೃತ್ಯಗಳು 12:12, 24). ನಂತರ, ಸುನ್ನತಿಯ ಕುರಿತು ಹೊಸ ಆಚರಣೆಯನ್ನು ಕಲಿತುಕೊಂಡರು. ಈ ವಿಚಾರದ ಹೊಸ ತತ್ವವನ್ನು ಇತರ ಸಭೆಗಳಿಗೆ ತಿಳಿಸಿದರು (ಅಪೊಸ್ತಲ ಕೃತ್ಯಗಳು 15:22-29).

ಇಕೋನ್ಯಾ, ಲುಸ್ತ್ರ ಹಾಗೂ ದರ್ಬೆಯವರು ಆತ್ಮೀಕವಾಗಿ ವೃದ್ಧಿಯಾದಂತೆ, ಭರವಸೆ, ಉತ್ತೇಜನ ಪ್ರಾರ್ಥನೆ ಹಾಗೂ ಉಪವಾಸದಲ್ಲಿ ಮುಂದುವರಿದರು (ಅಪೊಸ್ತಲರ ಕೃತ್ಯಗಳು 14:21, 22). ಸಿದ್ಧಾಂಥಗಳು ಹಾಗೂ ಆಚರಣೆಗಳ ಕುರಿತು ವಿಚಾರ ಮಾಡಿ, ಸಿರಿಯದ ಅಂತಿಯೋಕ್ಯ ಸಭೆಯವರು ಭಲಗೊಂಡರು (ಅಪೊಸ್ತಲರ ಕೃತ್ಯಗಳು 15:1, 2, 33-35). ದೇವರ ವಾಕ್ಯವನ್ನು ತ್ರೋವದವರು ಗಂಭೀರವಾಗಿ ಅಧ್ಯಯನ ಮಾಡಿದರು; ಅದರ ಸದಸ್ಯರು ವಾರದ ಮಾದಲನೆಯ ದಿನದಲ್ಲಿ ಆರಾಧನೆಗೆ ಗಂಭೀರವಾಗಿ ಸೇರಿಬರುತ್ತಿದ್ದರು (ಅಪೊಸ್ತಲರ ಕೃತ್ಯಗಳು 20:7).

ಈ ನಿರಂತರವಾದ ಬೆಳವಣಿಗೆಗಳು ವಿವಿಧ ಅಧ್ಯಯನ, ಆರಾಧನೆ ಹಾಗೂ ಪ್ರಸಂಗವು, ದೇವರನ್ನು ಮೆಚ್ಚಿಸುವಂಥ ಪ್ರೋತ್ಸಾಹವನ್ನು ನೀಡಿದವು. ಆತನ ಸಭೆಯ ಯೋಜನೆಯಲ್ಲಿ, ಕರ್ತನು ಅಪೊಸ್ತಲರನ್ನು ಪ್ರವಾದಿಗಳನ್ನು, ಸೌವಾರ್ತಿಕರನ್ನು ಸಭಾಪಾಲಕರನ್ನು ಹಾಗೂ ಉಪದೇಶಕರನ್ನು ಈ ಉದ್ದೇಶಕ್ಕಾಗಿಯೇ ನೀಡಿರುವನು (ಎಫೆಸ 4:11-16). ಆ ಮೊದಲ ಶತಮಾನದವರಿಗೆ ಮಾತ್ರ ಈ ವಿಧವಾದ ಅನುಕೂಲತೆಗಳನ್ನು ಅನುಗ್ರಹಿಸದೆ, ನಂತರದ ಶತಮಾನಗಳಲ್ಲಿ, ಯಾರ್‍ಯಾರು ಈ ಮಹಾಪರಿಶುದ್ಧ ನಂಬಿಕೆಯಲ್ಲಿ ಮುಂದುವರಿಯುತ್ತಾರೋ, ಅವರಿಗೂ ಸಹ ಅನುಗ್ರಹಿಸಲಾಗಿದೆ.

## ಕೊರತೆಯುಳ್ಳವರಿಗೆ ಸಭೆಗಳು ಸಹಾಯಿಸಿದವು

ಸುವಾರ್ತೆ ಹಾಗೂ ಪ್ರೋತ್ಸಾಹದ ನಡುವೆ, ಕೊರತೆಯುಳ್ಳವರಿಗೆ ಸಭೆಗಳವರು ಸಹಾಯಿಸಿದರು. ಅದು ಅಪೊಸ್ತಲರ ಬೋಧನೆಗನುಗುಣವಾಗಿತ್ತು (ಅಪೊಸ್ತಲರ ಕೃತ್ಯಗಳು 11:28-30; 1 ಕೊರಿಂಥ 16:1-4). ಮತ್ತು ಮುಂದಿನ ಜನಾಂಗಕ್ಕೆ ಅದು ನಿದರ್ಶನವಾಯಿತು. ಕೊರತೆಗಳ ವಿಶೇಷ ಸಮಯದಲ್ಲಿ ಯೆರೂಸಲೇಮಿನವರು ಕಾರ್ಯಪ್ರವೃತ್ತರಾದರು, [2] ಅದೇ ರೀತಿಯಲ್ಲಿ ಅತಿಬೇಗನೆ ಯೆರೂಸಲೇಮಿನವರ ಕೊರತೆಯನ್ನು ಅಂತಿಯೋಕ್ಯದ ಕ್ರೈಸ್ತರು ನೀಗಿಸಿದರು (ಅಪೊಸ್ತಲರ ಕೃತ್ಯಗಳು 11:28-30).

ಮುಂದೆ ಉಂಟಾದ ಕ್ಷಾಮದ ಸಮಯದಲ್ಲಿ, ಯುದಾಯದ ಪ್ರಾಂತದವರಿಗೆಲ್ಲಾ ಕೊರತೆ ಉಂಟಾಯಿತು; ಆಗ ಮೆಕೆದೋನ್ಯದ ಸಭೆಯವರು "ಅವರಿಗೆ" ಶಕ್ತಿ ಮೀರಿ ಸಹಾಯಿಸಿದರು ಎಂದು ಪೌಲನು ಬರೆದನು (2 ಕೊರಿಂಥ 8:1-5). ಕ್ಷಾಮದ ಸಮಯದಲ್ಲಿ ಸಹಾಯ ಮಾಡಿದವರ ಗುಂಪಿಗೆ ಅಖಾಯದವರು ಸಹ ಸೇರ್ಪಡೆಯಾಗಿರುವರು (ರೋಮಾಪುರ 15:26; 2 ಕೊರಿಂಥ 9:2). ಗ್ರೀಸ್‌ನಲ್ಲಿದ್ದ ಕೊರಿಂಥದವರು ತಾವು ಒಂದು ವರ್ಷದ ಹಿಂದೆ ಮಾಡಿದ ಸಹಾಯದ ವಾಗ್ದಾನವನ್ನು ಈಡೇರಿಸಬೇಕೆಂದು ಪೌಲನು ಬೇಡಿಕೊಂಡನು (1 ಕೊರಿಂಥ 16:1-4; 2 ಕೊರಿಂಥ 8; 9).

ಸಭೆಯ ಈ ಸಹಾಯದ ಕೃತ್ಯಕ್ಕೆ, ಸಭಿಕರು ಸಹ ಸ್ಪಂಧಿಸಿದರು, ಹಾಗೂ ವೈಯಕ್ತಿಕ ವಾಗಿ ಉದಾರಿಗಳೂ ಹಾಗೂ ಸ್ವತಂತ್ರರೂ ಆಗಿರಬೇಕೆಂದು ಮನವಿ ಮಾಡಲಾಯಿತು (ಗಲಾತ್ಯ 6:10; ಎಫೆಸ 4:28; ಯಾಕೋಬ 2:15, 16; 1 ಯೋಹಾನ 3:17). ಯೇಸು

ತಾನೇ ಬೋಧಿಸಿ, "ತೆಗೆದುಕೊಳ್ಳುವದಕ್ಕಿಂತಲೂ ಕೊಡುವದೇ ಹೆಚ್ಚಿನ ಭಾಗ್ಯ" ಆ ಮಾತು ಅಪೊಸ್ತಲರ ಕೃತ್ಯದಲ್ಲಿ ನೆರವೇರದೆ ಇದಿದ್ದರೆ, ಆ ಯೇಸುವಿನ ಈ ಕುರಿತಾದ ಮಾತು ದಾಖಲೆಯಾಗುತ್ತಿರಲಿಲ್ಲ (ಅಪೊಸ್ತಲರ ಕೃತ್ಯಗಳು 20:35). ಸಹಾಯ ಮಾಡುವದು ಕರ್ತನ ಸಭೆಯಲ್ಲಿರುವ ಕ್ರೈಸ್ತರ ನಿದರ್ಶನವಾಗಿದೆ.

## ಮುಕ್ತಾಯ

ನಂಬಿಕೆಯಿಂದ ನಡೆಯುವವರೇ ಕ್ರೈಸ್ತರು (2 ಕೊರಿಂಥ 5:7); ಅವರು ದೇವರ ಮೇಲೆ ಭರವಸವಿಟ್ಟು ಆತನ ವಾಕ್ಯದ ಮಾರ್ಗದರ್ಶನದಲ್ಲಿ ನಡೆಯುವವರೇ (ರೋಮಾಪುರ 10:17). ನಿಜವಾದ ಕರ್ತನ ಶಿಷ್ಯರು ಮುಂದೆ ಹೋಗಲು ಹಾಗೂ ತಮ್ಮ ಅಧಿಕಾರಕ್ಕೆ, ದೇವ ವಾಕ್ಯವನ್ನೆ ಗಮನಿಸುವವರಾಗಿರುತ್ತಾರೆ. ಹೊಸ ಒಡಂಬಡಿಕೆಯಲ್ಲಿ ಅಪೊಸ್ತಲರ ಬೋಧನೆಯ ಸಂಗತಿಗಳನ್ನು ಒಬ್ಬನು ಅನುಸರಿಸದೆ ಹೋದರೆ, ಅವನು ನಂಬಿಕೆಯಿಂದ ನಡೆಯುವವನು ಎಂದು ಊರ್ಜಿತವಾಗುವದಿಲ್ಲ. ಕೆಲವು ಸಂಘ ಸಂಸ್ಥೆಗಳು ಬಾಹಿರವಾಗಿ ನಯವಾಗಿ ಕಂಡರು, ಮತ್ತು ಅವರು ಮಾಡುವ ಸಂಗತಿಗ ಳಲ್ಲಿ ಕೆಲವು ಒಳ್ಳೆಯದಾಗಿದ್ದರೂ; ಅದು ದೇವರ ನಿಯಮಕ್ಕೆ ಅನುಗುಣವಾಗಿರದಿದ್ದರೆ, ಅವರು ಕ್ರಿಸ್ತನ ನಂಬಿಕೆಯಲ್ಲಿರುವ ಫಲಗಳಲ್ಲ. ಒಂದು ವೇಳೆ ಅವರು ಮನುಷ್ಯನ ಉಚ್ಚ ಜ್ಞಾನದ ಫಲಗಳಾಗಿದ್ದರೂ, ಅವರ ಮೂಲ ಮಾನವನದಾಗಿರುತ್ತದೆ ವಿನಃ, ಧೈವಿಕವಾಗಿರುವದಿಲ್ಲ.

---

ಟಿಪ್ಪಣೆಗಳು

[1]ರೋಮಾಯರ ನಿಯಮಕ್ಕೆ ವಿರುದ್ಧವಾದ ಪೆಟ್ಟುಗಳಾಗಿದ್ದವು ಯಾಕಂದರೆ ಅವರನ್ನು ವಿಚಾರಿಸಿ ತಪಿತಸ್ಥರೆಂದು ಪರಿಗಣಿಸಿರಲಿಲ್ಲ. [2]"ಪ್ರೀತಿಯ ಔದಾರ್ಯ" ಪಾಠವನ್ನು ಈ ಪುಸ್ತಕದಲ್ಲಿ ನೋಡ ಲಾಗಿದೆ.